ನಿನ್ನಂಥವರು, ಎಲ್ಲರೂ ಈ ಕೆಲಸಕ್ಕೆ ಕೈ ಜೋಡಿಸಿದ್ದಕ್ಕೇ ಈ ಕೆಲಸವೀಗ ಸರಾಗವಾಗಿ ಮುಂದುವರಿದಿದೆ. ಈಗ... ಇಲ್ಲಿರುವ ಈ ಎರಡು ಮರಗಳಲ್ಲಿ ಒಂದು ಮರವನ್ನು ಕಡಿಯಲು ನೀನು ಮನಸ್ಸಾರೆ ಒಪ್ಪಿಗೆ ಕೊಟ್ಟರೆ ಮಾತ್ರವೇ ಅದು 'ಕೊಡಿಮರ'ವಾಗಿ ಆ ದೈವವನ್ನು ಕಾಯ್ತದೆ... ನಮ್ಮ ಊರನ್ನೂ ಕಾಯ್ತದೆ. ನಿನ್ನಜ್ಜ ನೆಟ್ಟ ಮರ, ನೀನು ಬೆಳೆಸಿದ ಈ ಮರ, ಊರದೈವವನ್ನು ಕಾಯ್ತದೆ ಅನ್ನುವ ನಂಬಿಕೆ, ಭಕ್ತಿ ನಿನ್ನಲ್ಲಿದ್ದರೆ ಮಾತ್ರವೇ ನೀನು ಇದಕ್ಕೆ ಒಪ್ಪಬಹುದು. ಇಲ್ಲದಿದ್ದರೆ ನನಗೆ ಮರವೇ ಬೇಡ. 'ಜಾಗ ನಂದು ಮರ ನಿಂದು', 'ಮರ ನಿಂದು ಜಾಗ ನಂದು' ಎಂಬ ಮಾತು ಬರೋದಾದ್ರೆ ಈ ಮರವೇ ಬೇಡ.

ಪಟೇಲರ ಮಾತಿಗೆ ತಿಂಮಪೂಜಾರಿ ಮೌನವಾದ. 'ದೈವದ ಕೆಲ್ಸವೇನೋ ನಿಜ; ಆದರೆ ದೈವ–ದೇವರ ಕೆಲಸ ಎಂದು ಹೆತ್ತ ಮಗುವನ್ನೇ ಬಲಿ ಕೊಡೋದು ಸರಿಯಾ...' ಎನ್ನುವಷ್ಟರ ಮಟ್ಟಿಗೆ ಯೋಚಿಸುತ್ತಾ ಆತ ನಿಧಾನಕ್ಕೆ 'ಅಪ್ಪನಾಗಿ' ಗಟ್ಟಿಯಾದ. 'ದೈವದ ಕೆಲಸಕ್ಕಾ? ಹಾಗಾದ್ರೆ ಬೇಡ ಪಟೇಲ್ರೆ... ನನ್ನ ಮಗುವನ್ನು ಬಲಿ ಕೊಟ್ಟು ನೀವು ದೈವಕ್ಕೆ ಒಳ್ಳೆಯವರಾಗುವುದು ಬೇಡ... ಊರಿಗೂ ಒಳ್ಳೆಯರಾಗುವುದು ಬೇಡ; ನನ್ನ ಕಣ್ಣೆದುರೇ ಬೆಳೆದ ಮರಗಳಿವು. ಅದನ್ನು ಕಡಿಯುವುದೂ ಒಂದೇ... ನನ್ನ ಮಕ್ಕಳನ್ನು ಕಡಿಯುವುದೂ ಒಂದೇ... ಮಕ್ಕಳ ಮೇಲಿನ ಮಮಕಾರದಲ್ಲಿ ಹೆಚ್ಚು... ಕಮ್ಮಿ ಅಂತ ಇದೆಯಾ...' ಎಂದು ಒಡೆಯರಿಗೆ ಧೈರ್ಯವಾಗಿ ಹೇಳಬೇಕೆನಿಸಿತ್ತು.

ಆದರೆ ಆತನಿಗೆ ಧೈರ್ಯವೆಲ್ಲಿದೆ? ತಾನು ಅವರ ಚಾಲಗೇಣಿಯ ಒಕ್ಕಲು. ಅವರು ಕೊಟ್ಟ ಗದ್ದೆಯಲ್ಲಿ ತಾನು ಬೆಳೆ ತೆಗೆಯುವವನು ಅಷ್ಟೆ. ಆ ಜಾಗ ತನ್ನದಲ್ಲ. ಆ ಮರಗಳಿರುವ ಕಟ್ಟಹುಣಿಯೂ ತನ್ನದಲ್ಲ; ಆದರೆ ನನ್ನ ಕಣ್ಣೆದುರೇ ಬೆಳೆದ ಮರಗಳಿವು; ನನ್ನ ಮಕ್ಕಳ ಹಾಗೆಯೇ... ಎಂದು ಒಳಗೊಳಗೇ ಹಲಬುತ್ತ... ಆತ ಹನಿಗಣ್ಣಾಗಿ ಮೌನಕ್ಕೆ ಜಾರಿದ್ದ.

ದೇವಪ್ಪ ಪಟೇಲ್ರು ತಿಂಮನ ಮೌನ ಕಂಡು ಅದೇ ಸಮಾಧಾನದ ಭಾವದಲ್ಲಿ ಮತ್ತೊಮ್ಮೆ ತಿಂಮ ಪೂಜಾರಿಯನ್ನು ಕೇಳಿದಾಗ, ಆ ಮರಗಳಿರುವ ಜಾಗದ ಒಡೆಯ ಸಾಧು ಶೆಟ್ಟಿಗೆ ನಿಜಕ್ಕೂ ಮಾವನ ಮೇಲೆ ಕೋಪ ಉಕ್ಕಿ ಬಂದಿತ್ತು. ಆದರೆ ದೇವು ಮಾವನ ಎದುರು ಉಸಿರು ಎತ್ತುವ ಹಾಗಿಲ್ಲವಲ್ಲ ಅವನು, ಅವರ ವ್ಯಕ್ತಿತ್ವವೇ ಅಂತಹದ್ದು.

ತಿಂಮಪೂಜಾರಿಯು ಪಟೇಲರಲ್ಲಿ, 'ನನ್ನದೇನಿದೆ ಧನಿಗಳೇ... ಇಲ್ಲಿ. ನೀವು ದೊಡ್ಡವರು; ಕಾಲಲ್ಲಿ ತೋರಿದ್ದನ್ನು ಕೈಯಲ್ಲಿ ಮಾಡುವವರು ನಾವು... ನನ್ನ ಮನಸ್ಸನ್ನು ನಿಮ್ಮೆದುರು ಇಟ್ಟಿದ್ದೇನೆ ಅಷ್ಟೆ. ಈಗ ಇದ್ದಕ್ಕಿದ್ದಂತೆ ಊರಿನ ದೈವಕಾರ್ಯಕ್ಕೆ ಅಡ್ಡ ಬಂದು ನಾನು ಬದುಕುವುದಕ್ಕುಂಟಾ?' ಎಂದು ಗದ್ಗದಿತನಾಗಿಯೇ ಅಂದು, ಮುಂದೆ ಒಂದು ಕ್ಷಣವೂ ಅಲ್ಲಿ ನಿಲ್ಲದೆ, ಹನಿಗಣ್ಣಾಗಿ ಮನೆಗೆ ತೆರಳಲು ಹುಣಿ ಏರಿದ್ದ. ಆತನ ಅಂತರಂಗವನ್ನು ಆ ಇಬ್ಬರು ಒಡೆಯರುಗಳ ಹೇಗೆ ಅರ್ಥೈಸಿಕೊಂಡರೋ... ದೇವರೇ ಬಲ್ಲ. ದೇವು ಪಟೇಲರು ಆತನ ಮಾತಿಗೆ ಒಮ್ಮೆ ನಿರಾಳತೆಯ ನಿಟ್ಟುಸಿರನ್ನು ಬಿಟ್ಟಿದ್ದರು. ಶೆಟ್ರುಗಳಿಬ್ಬರೂ, ತಮಗಿಷ್ಟವಾದ ಮರವನ್ನು ಸಾಧು ಶೆಟ್ಟಿಗೆ ತೋರಿಸಿ ಹಿಂದಿರುಗುವಷ್ಟರಲ್ಲಿ ತಿಂಮಪೂಜಾರಿ ಆತನ ಗುಡಿಸಲಿನೆದುರಿನ ಮರದ ಪಡಿಯಲ್ಲಿ ಕೂತು ಚಿಂತೆಗೀಡಾಗಿದ್ದ. ಆತನನ್ನು ಯಾಕೋ ಅಪರಾಧಿ ಪ್ರಜ್ಞೆ ಕಾಡತೊಡಗಿತ್ತು. ತಾನು ದೇವು ಪಟೇಲರ ಮಾತಿಗೆ ಹಾಗೆ ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಮಾತನಾಡಬಾರದಿತ್ತೇನೋ? ನೇರವಾಗಿ ಕಡ್ಡಿ ಮುರಿದಂತೆ ಅವಸರವಸರವಾಗಿ ಮಾತಾಡ್ಬೇಕಿತ್ತೇನೋ...' ಎಂದು ಒಂದು ಕ್ಷಣ ಆತನಿಗನಿಸಿದ್ದರೆ, ಮತ್ತೊಂದು ಕ್ಷಣ ಒಪ್ಪದಿರಲು ಅಥವಾ ಮರ ಕಡಿಯಬೇಡಿ ಅಂತ ಅವರಿಗೆ ಹೇಳಲು ನಾನ್ಯಾರು, ಆ ಜಾಗ ನನ್ನದೇನು? ಎಂಬ ದ್ವಂದ್ವ ಅನಿಸಿಕೆಗಳೆಲ್ಲವೂ ಆತನನ್ನು ಇಕ್ಕಟ್ಟಿಗೆ ಸಿಲುಕಿಸಿ ಚಿಂತೆಗೀಡು ಮಾಡಿಸಿ, ಹಿಂಡಿ ಹಿಪ್ಪೆ ಮಾಡತೊಡಗಿದ್ದವು.

ಹಾಗೆ ಸಾಧು ಶೆಟ್ಟಿಯ ಬೈಲಿನಿಂದ ಹಿಂದಿರುಗಿದ ದೇವಪ್ಪ ಶೆಟ್ಟರು, ಭಾವ ಮಾರಪ್ಪಾಳ್ವರನ್ನು ಅವರ